ವಿ. ಹಮೀದ್, ವಿಟ್ಲ
*ಹುಣ್ಣಿಮೆ ಚಂದಿರನಂತೆ ಇರುವ ಹುಡುಗಿ ಎಲ್ಲಿ ಸಿಕ್ಕುತ್ತಾಳೆ?*



ಸಾಮಾನ್ಯವಾಗಿ ಅಮಾವಾಸ್ಯೆಯಂತಿರುವ ಧಡಿಯ ಅಪ್ಪನ ಪಕ್ಕದಲ್ಲಿ.

ಫಾಲನೇತ್ರ ಸಜ್ಜನ, ಶಿರಸಿ
*ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನಾಗೂ, ತೇನ ವಿನಾ ತೃಣಮಪಿ ನ ಚಲತಿಗೂ ಬಹಳ ವ್ಯತ್ಯಾಸವಿದೆಯಲ್ಲಾ....?*
ನಿಜ. ಎರಡೂ ಬೋನಸ್ ಕೇಳಿದಾಗ ಕಂಪೆನಿ ಹೇಳುವ ನುಡಿಗಳೇ; ಕಾರ್ಮಿಕ ಕೇಳಿದಾಗ ಅದು. ಕಾರ್ಮಿಕ ಮುಖಂಡ ಕೇಳಿದಾಗ ಇದು!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಗಂಡಂದಿರನ್ನು ಎದುರಿಸುವ ಹೆಂಗಸರಿಗೆ ಹಲ್ಲಿ, ಜಿರಳೆಗಳನ್ನು ಕಂಡರೆ ಏಕೆ ಭಯ?*
ಹಲ್ಲಿ, ಜಿರಳೆಗಳು ಅವರ ನಗೆಗೂ, ಹಗೆಗೂ ಗಂಡನಂತೆ ಮಣಿಯದೆ ಮುನ್ನುಗ್ಗುವುದರಿಂದ.

ಕುಮಾರ ಚಲವಾದಿ, ಹೊಳೆನರಸಿಪುರ
*ದ್ರೌಪದಿಯ ಸೀರೆ ಎಳೆದಾಗ ಪ್ರತ್ಯಕ್ಷನಾದ ದೇವರು ಅರ್ಧರಾತ್ರಿಯಲ್ಲಿ ತರುಣಿಯನ್ನು ತಬ್ಬಿ ಮುತ್ತಿಕ್ಕುವಾಗ ಏಕೆ ಬರುತ್ತಿಲ್ಲ?*



ಇರುತ್ತಾನಲ್ಲ! ಈಗ ಜನ, ಟ್ರಾಫಿಕ್ ಹೆಚ್ಚಾದ್ದರಿಂದ ದೇವ ಪೆಪ್ಪರ್ ಸ್ಪ್ರೇ ರೂಪದಲ್ಲಿರುತ್ತಾನೆ.

ಎಂ.ಬಿ. ರಂಗಪ್ಪಶೆಟ್ಟಿ, ಮೋಕಾ
*ವ್ಯಕ್ತಿಯ ಉನ್ನತಿ, ಅವನತಿಗೆ ಅದೃಷ್ಟ ಕಾರಣವೋ, ವಾಸ್ತುದೋಷ ಕಾರಣವೋ?*
ಅವನ ನಿಷ್ಠೆ, ಅವನಿಷ್ಟ, ಅನಿಷ್ಟಗಳೇ ಕಾರಣ.

ದೇವೇಂದ್ರ, ಕಡೂರು
*ಬರ್ತಾ ಬರ್ತಾ ಸಕಾರಾತ್ಮಕವಾಗಿ ಸ್ಪಂದಿಸುವವರ ಸಂಖ್ಯೆ ಕಡಿಮೆಯಾಗ್ತಿಲ್ವೆ?*
ದೃಶ್ಯಮಾಧ್ಯಮದ ಫಲ; ಸೀರಿಯಲ್‌ನಲ್ಲಿ ಒಳ್ಳೆಯ ಸ್ತ್ರೀಯಿಲ್ಲ, ಬ್ರೇಕಿಂಗ್ ನ್ಯೂಸಲ್ಲಿ ಒಳ್ಳೆಯ ಪುರುಷನಿಲ್ಲ!

ಜೆ.ಆರ್. ಕಲ್ಲಪ್ಪ ಹೊಸಮನೆ, ಅರಸೀಕೆರೆ
*ಇಷ್ಟೆಲ್ಲ ವಿಜ್ಞಾನದಲ್ಲಿ ಮುಂದುವರೆದಿರುವ ಭಾರತ ಕಸ, ಮಲಿನತೆ, ನಿಂತ ನೀರು, ಸೊಳ್ಳೆಗಳಿಂದ ಮುಕ್ತವಾಗಿಲ್ಲವೇಕೆ?*
ಧೋರಣೆಯ ಫಲ! ಹೊಸ ಪೊಗರು ಹಳೆ ಕೆಸರು ಕೂಡಿರಲು ಬಲು ಹೊಲಸು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಿಮ್ಮನ್ನೇಕೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಬಾರದು?*
ಅಲ್ಲಿ 'ನೀವು ಕೇಳದಿರಿ' ಧೋರಣೆ ಇರುವವರಿಗೆ ಮಾತ್ರ ಮಣೆಯಂತೆ.

ಟಿ.ಆರ್. ರವೀಂದ್ರ, ಬೆಂಗಳೂರು
*ಪಾಪದ ಕೊಡ ತುಂಬಿದರೆ ಮನುಷ್ಯನ ನಾಶವಾಗುತ್ತದೆ. ಪುಣ್ಯದ ಕೊಡ ತುಂಬಿದರೆ?*
ಮನುಷ್ಯ ದೇವನಾಗಿಬಿಡುವುದರಿಂದ ದೇವೇಂದ್ರನೇ ಕೊಡ ತುಂಬದಂತೆ ರಂಧ್ರ ಕೊರೆಯುವನಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ನಿಜವಾದ ಸಂತೋಷ ಯಾವುದು?*
ಕರುಣಾಶ್ರಯದ ಮರಣಶಯ್ಯೆಯ ರೋಗಿಗಳು ನೋವು ಮರೆತು ನಗುವಂತಹ ಕ್ಷಣಗಳನ್ನು ನೀಡುವುದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ವೆಲ್ಡಿಂಗ್‌ಗೂ, ವೆಡ್ಡಿಂಗ್‌ಗೂ ಏನು ವ್ಯತ್ಯಾಸ?*
ವೆಲ್ಡಿಂಗ್ ಮಾಡುವಾಗ ಕಿಡಿಗಳು ಹಾರುತ್ತವೆ; ವೆಡ್ಡಿಂಗ್ ಆದನಂತರ ಕಿಡಿಗಳು ಹಾರುತ್ತವೆ.

ಎಂ.ಎ. ಕುಮಾರ್, ಬೆಂಗಳೂರು
*ಅತಿಥಿ ಅತಿಯಾಗುವುದು ಯಾವ ಸಂದರ್ಭದಲ್ಲಿ?*
ಅತಿಥೇಯನ ದುಡಿಮೆಯ ಸಮಯವನ್ನು ತಿಥಿ ಮಾಡಿದಾಗ.

ಎನ್. ದಿನೇಶ್, ತೀರ್ಥಹಳ್ಳಿ
*ಇತ್ತೀಚೆಗೆ ಕಾವ್ಯ ಬರೆಯುವ ಕವಿಗಳೇ ನಾಪತ್ತೆಯಾಗಿದ್ದಾರೆ. ಏಕೆ?*
ಊಟ, ತಿಂಡಿ, ದುಡ್ಡು ಕೊಟ್ಟರೂ ಕಾವ್ಯ ಕೇಳುವ ಕಿವಿಗಳು ಸಿಗುತ್ತಿಲ್ಲವಾದ್ದರಿಂದ.

## ಬಹುಮಾನಿತ ಪ್ರಶ್ನೆ

ಭಾರತಿ ಮಾನಗೆ, ಹೊನ್ನಾವರ
*ಈಗಿನ ಜನರು ಬುಕ್‌ಗಿಂತ ಫೇಸ್‌ಬುಕ್ಕನ್ನೇ ಹೆಚ್ಚು ಉಪಯೋಗಿಸುವುದೇಕೆ?*
ಸ್ವಪ್ರಶಂಸೆಯ ಗೀಳಿಗೆ ಗುಲಾಮರಾಗಿರುವುದರಿಂದ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
*ರಿಟೈರಾದಮೇಲೆ ಸತಿಸುತರು ಗೌರವಿಸುವುದಿಲ್ಲವಾದ್ದರಿಂದ ಅದಕ್ಕೂ ಮುಂಚೆ ಜೀವನದಿಂದ ನಿವೃತ್ತನಾಗಬೇಕು ಎನ್ನುವನಲ್ಲಾ...?*
ಗುಡ್. ಬೇಗ್ನಾಯಿ. ನಿನ್ನೆಲ್ಲ ಮಗನಿಗೆ ಸಿಗತ್ತೆ ಅನ್ನಿ. ನಿಮ್ಮನ್ನೇ ನೇಣ್ಹಾಕಿಯಾನು, ತಾನು ಸಾಯಲ್ಲ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಸ್ಮರಣೆಗೆ ಮರಣವಿಲ್ಲ ಎನ್ನುವರಲ್ಲಾ, ನೀವೇನಂತೀರಿ?*
ಮರಣವಿಲ್ಲ, ಆದರೆ ಹಣ ನೀಡಬೇಕಷ್ಟೆ. ದುಡ್ಡಿಲ್ಲದೆ ಎಲ್ಲಿಯೂ ಚಿರಸ್ಮರಣೆ ಇಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು
*ಈ ಧೂಳು, ಹೊಗೆಯಿಂದ ಮುಕ್ತಿ ಇಲ್ಲವೆ?*



ಹೆಚ್ಚು ಹೆಚ್ಚು ಮರ, ಹೆಚ್ಚು ಹೆಚ್ಚು ಪ್ರಯಾಣಕ್ಕೆ ಪಾದ ಬೆಳೆಸಿದರೆ ಸಾಧ್ಯ.

ಎಂ.ಜಿ. ಉಮಾ, ಬಳ್ಳಾರಿ
*ಮಂತ್ರಿಗಳು ಕೆಸರಿನಲ್ಲಿ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂದರು. ಏಕೆ?*
ಅಂಗಾತ ಬಿದ್ದರಂತೆ.

ಕೆ.ಎಂ. ವಿಭೂತಿ, ಹರಿಹರ
*ನಮ್ಮೂರ ಮಂದಿರಗಳಲ್ಲಿ ದೇವರು, ದೆವ್ವ ಜೊತೆಜೊತೆಗೆ ಇರುವುದರ ರಹಸ್ಯ ನಿಮಗೇನಾದರೂ ಗೊತ್ತಾ?*
ಕೇವಲ ದೇಗುಲವೇ? ನಮ್ಮಲ್ಲಿ ಮನೆಮನೆಗಳಲ್ಲೂ ಹೀಗಿರುವುದೇ ಪದ್ಧತಿ!

■ ರಾಮ್